| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 247-22**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 2

ಸಾಕ್ಷಿದಾರನ ಹೆಸರು : ಶೇಕ್ ಹಬೀಬ್
ತಂದೆಯ ಹೆಸರು : ಶೇಕ್ ಮಹಮ್ಮದ್
ಪ್ರಾಯ : 52 ವರ್ಷ
ಉದ್ಯೋಗ : ಬಸ್ಸು ಏಜೆಂಟ್
ವಾಸ : ತೆಳ್ಳಾರು

ದಿನಾಂಕ 03.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ.

ಸುಮಾರು 3 ವರ್ಷದ ಹಿಂದೆ ಪೊಲೀಸರು ಮಹಜರು ಮಾಡಲು ನನ್ನನ್ನು ಪೊಲೀಸ್ ಠಾಣೆಗೆ ಕರೆದಿರುತ್ತಾರೆ. ಯಾವ ವಿಚಾರಕ್ಕೆ ಕರೆದಿರುತ್ತಾರೆ ಎಂದು ಗೊತ್ತಿಲ್ಲ. ಆ ಸಮಯದಲ್ಲಿ ಬೇರೆ ಯಾರು ಹಾಜರಿದ್ದರು ಎಂದು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿರುವುದಿಲ್ಲ. ನಾನು ಪೊಲೀಸರು ಕೊಟ್ಟ ದಾಖಲೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ನಾನು ತಕ್ಷೀರು ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಮಹಜರಿನಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು

ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ-1 ರಿಂದ 4 ಗಳನ್ನು ನನಗೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ</u>

2. ದಿಃ 03.02.2021 ರಂದು ನಾನು ಹಾಗೂ ಚಾಸಾ-3 ರವರು ತೆಳ್ಳಾರಿನಲ್ಲಿರುವಾಗ ಬೆಳಿಗ್ಗೆ 8.30 ಗಂಟೆಗೆ ಚಾಸಾ-1 ರವರು ನಮ್ಮಲ್ಲಿ ದುರ್ಗಾ ಗ್ರಾಮದ ತೆಳ್ಳಾರು ಎಂಬಲ್ಲಿ ಆಸಿಯಾ ಮಂಜಿಲ್ ಎಂಬಲ್ಲಿ ದನದ ಮಾಂಸ ಇರುವುದಾಗಿ ಬಾತ್ಮೀದಾರರು ಮಾಹಿತಿ ನೀಡಿದ ಮೇರೆಗೆ ಆ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವ ಸಮಯದಲ್ಲಿ ಪಂಚರಾಗಿ ಹಾಜರಿರುವಂತೆ ಕೋರಿದ್ದು ನಾನು ಹಾಗೂ ಚಾಸಾ-3 ರವರು ಚಾಸಾ-1 ಹಾಗೂ ಸಿಬ್ಬಂದಿಯವರೊಂದಿಗೆ ಸದ್ರಿ ಆಸಿಯಾ ಮಂಜಿಲ್ ಗೆ ಹೋಗುತ್ತಿದ್ದಾಗ ಆರೋಪಿತರು ಮನೆಯ ಬದಿಯ ಹಾಡಿಯಲ್ಲಿ ಓಡಿ ಹೋದರು ಎಂದರೆ ಸರಿಯಲ್ಲ. ಚಾಸಾ-1 ರವರು ಮನೆಯ ಅಂಗಳದಲ್ಲಿ ಇದ್ದ ಚಾಸಾ-9 ರವರನ್ನು ವಿಚಾರಿಸಿದ್ದು ಆಕೆಯು 1 ನೇ ಆರೋಪಿ ತನ್ನ ಗಂಡ, 2 ನೇ ಆರೋಪಿ ತನ್ನ ಮಗ, ಅವರು ಎಲ್ಲಿಂದಲೊ ದನಗಳನ್ನು ಕದ್ದು ತಂದು ಮಾಂಸ ಮಾಡಿ ಮಾಂಸದ ತುಂಡುಗಳನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿ ಬಕೆಟ್ ನಲ್ಲಿ ಹಾಕಿ ಮಾರಾಟ ಮಾಡುವ ಬಗ್ಗೆ ಮನೆಯ ಬಾತ್ ರೂಂ ಬಳಿ ತಂದು ಇಟ್ಟಿರುವುದಾಗಿ ಪೊಲೀಸರನ್ನು ಕಂಡು 1 ಮತ್ತು 2 ನೇ ಆರೋಪಿತರು ಹಾಡಿಯಲ್ಲಿ ಓಡಿ

ಹೋಗಿರುವುದಾಗಿ ಬಾತ್ ರೂಂನ ಬಕೆಟ್ ನಲ್ಲಿದ್ದ ಮಾಂಸದ ತುಂಡುಗಳನ್ನು ತೋರಿಸಿಕೊಟ್ಟರು ಎಂದರೆ ಸರಿಯಲ್ಲ. ನಂತರ ಚಾಸಾ-17 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ನನ್ನ ಹಾಗೂ ಚಾಸಾ-3 ಮತ್ತು 9 ರವರ ಸಮಕ್ಷಮ ಮನೆಯ ಪೂರ್ವದ ಬದಿಯಲ್ಲಿ ಮಾಂಸ ತುಂಬಿದ 2 ಬಕೆಟ್ ಗಳನ್ನು ತಲಾ 6 ಮತ್ತು 12 ರಂತೆ ಮಾಂಸ ತುಂಬಿದ ಪ್ಯಾಕೆಟ್ ಗಳನ್ನು ಹಾಗೂ ಮಾಂಸ ತುಂಡು ಮಾಡಲುಉಪಯೋಗಿಸಿದ ಮರದ ತುಂಡು, ಮರದ ಹಿಡಿ ಇರುವ ಕಬ್ಬಿಣದ ಕತ್ತಿ, ಮತ್ತು ಪ್ಲಾಸ್ಟಿಕ್ ಕೈ ಚೀಲ ಮಹಜರು ಮುಖೇನ ನನ್ನಸಮಕ್ಷಮ ಪೊಲೀಸರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ಸ್ಥಳದಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ 04.02.2021 ರಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಎ ಕೆ ಎಂ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 5 to 14. As the eye witness Pw 1 to 4 have completly turned hostile to the case of prosecution. No purpose will be served by issuance of summons to CW 5 to 14. Hence by rejecting the prayer of learned APP evidence of CW 5 to 14 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for Arguments.

Call on 14-07-2023.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala